INDIAN JOURNAL OF HISTORY AND ARCHAEOLOGY
ISSN (e):2582-225Xwww.ijha.in
Vol-8, Issue -01,January-February, 2026
Page No,15-20
Peer -Reviewed, Refereed Journal

# ಬೇಸೂರು ಮೋಹನ್ ಪಾಳೇಗಾರ್ ಅವರ ಭಾವದೀಪ್ತಿ–ಕಾದಂಬರಿಯಲ್ಲಿ ಮನೋವೈಜ್ಞಾನಿಕ ನೆಲೆ

*.ಶಿಲ್ಪ.ಎಂ.[1]
**ಡಾ.ಕೆ.ಎನ್.ಗಂಗಾನಾಯಕ್.[2]

ಸಾಹಿತ್ಯವು ಸಮಾಜದ ಹೊರಗಿನ ವಾಸ್ತವವನ್ನು ಮಾತ್ರವಲ್ಲ, ವ್ಯಕ್ತಿಯ ಒಳಜಗತ್ತಿನ ಮನೋಭಾವನೆಗಳನ್ನೂ ವಿಶ್ಲೇಷಿಸುವ ಶಕ್ತಿಯನ್ನು ಹೊಂದಿದೆ. ಮಾನವನ ಆಲೋಚನೆ, ಭಾವನೆ ಮತ್ತು ವರ್ತನೆಗಳು ಸಾಮಾಜಿಕ ಪರಿಸರದ ಪ್ರಭಾವದಿಂದ ಹೇಗೆ ರೂಪುಗೊಳ್ಳುತ್ತವೆ ಎಂಬುದನ್ನು ಕಾದಂಬರಿಗಳು ಸೂಕ್ಷ್ಮವಾಗಿ ಪ್ರತಿಬಿಂಬಿಸುತ್ತವೆ. ಈ ಹಿನ್ನೆಲೆಯಲ್ಲೇ ಕನ್ನಡ ಸಾಹಿತ್ಯದಲ್ಲಿ ಮನೋವೈಜ್ಞಾನಿಕ ವಿಮರ್ಶೆ ಮಹತ್ವ ಪಡೆದಿದೆ.

ಮಾನವನ ವರ್ತನೆಗಳ ವೈಜ್ಞಾನಿಕ ಅಧ್ಯಯನವಾದ ಮನೋವಿಜ್ಞಾನವು ಅನೇಕ ಸಮಸ್ಯೆಗಳಿಗೆ ಪರಿಹಾರವನ್ನು ಸೂಚಿಸುವುದರಿಂದ ಕಾದಂಬರಿಕಾರರಿಗೆ ಮನೋವಿಜ್ಞಾನದ ಅರಿವು ಅತ್ಯಗತ್ಯ. ಮನೋವಿಜ್ಞಾನವನ್ನು ಸಾಹಿತ್ಯದಲ್ಲಿ ಸಮೀಕರಿಸಿದ ಹಿನ್ನೆಲೆಯಲ್ಲಿ ಕನ್ನಡದ ಅನೇಕ ಮಹತ್ವ ಪೂರ್ಣ ಕಾದಂಬರಿಗಳು ಹೊರಬಂದಿದೆ. ಅದರಲ್ಲಿ ಕನ್ನಡದ ಪ್ರಮುಖ ಕಾದಂಬರಿಗಾರ್ತಿಯಾದ ತ್ರಿವೇಣಿಯವರು ಗುರುತಿಸಲೇಬೇಕಾದ ಹೆಸರು.

ಪಾಳೇಗಾರ್ ಅವರು ಮನುಷ್ಯನ ಮಾನಸಿಕ ಅಸ್ಥಿರತೆಗೆ ಕಾರಣವಾಗುವ ಅಸೂಹೆ, ಕೋಪ, ಆತಂಕ, ಮಾನಸಿಕ ಖಿನ್ನತೆ, ಆಘಾತ, ಹತಾಶೆ, ಮನೋಭಾವ ಮುಂತಾದ ಮನೋ ವಿಶ್ಲೇಷಣಾತ್ಮಕ ಅಂಶಗಳನ್ನು ತಮ್ಮ ಕಾದಂಬರಿಗಳಲ್ಲಿ ತರುವ ಮೂಲಕ ವಿಷಯ ವಸ್ತುಗಳ ಎಲ್ಲೆಯನ್ನು ವಿಸ್ತರಿಸಿಕೊಳ್ಳುತ್ತಾ ಹೋಗಿದ್ದಾರೆ. ವ್ಯಕ್ತಿ ಹುಟ್ಟಿನಿಂದ ಸಾಯುವ ತನಕ ಪ್ರತಿದಿನ ಹಲವಾರು ಸಮಸ್ಯೆ ಅವುಗಳನ್ನು ಪ್ರಚೋದಿಸುತ್ತಲೇ ಇರುತ್ತದೆ. ಹಾಗಾಗೀ ಮನಸ್ಸಿನ ವಿಚಲಿತ ಸ್ಥಿತಿಯನ್ನು ಪಾಳೇಗಾರ್ ಅವರು ತಮ್ಮ ಕಾದಂಬರಿಗಳಲ್ಲಿ ಕಟ್ಟಿಕೊಡಲು ಪ್ರಯತ್ನಿಸಿದ್ದಾರೆ. ಜೊತೆಗೆ ಮನೋರೋಗದಿಂದ ನರಳುವ

[1]. ಸಂಶೋಧಕರು,ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ,ಮಾನಸಗಂಗೋತ್ರಿ, ಮೈಸೂರು ವಿಶ್ವವಿದ್ಯಾನಿಲಯ,ಮೈಸೂರು.
[2].ನಿವೃತ್ತಪ್ರಾಧ್ಯಾಪಕರು,ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ,ಮಾನಸಗಂಗೋತ್ರಿ,ಮೈಸೂರುವಿಶ್ವವಿದ್ಯಾನಿಲಯ,ಮೈಸೂರು.

ಮತ್ತು ಜೀವನ ಕೌಶಲ್ಯಗಳ ಅರಿವಿಲ್ಲದೆ ಆತ್ಮಹತ್ಯೆಗೆ ಪ್ರಯತ್ನ ಮಾಡುವ ಅನೇಕ ಪಾತ್ರಗಳನ್ನು ಸೃಷ್ಟಿಸಿದ್ದಾರೆ.

Keywords : ಮನೋವೈಜ್ಞಾನಿಕ, ಅನುಮಾನ, ಪ್ರೀತಿ, ಆತ್ಮಹತ್ಯೆ, ಮೂಢನಂಬಿಕೆ

ಭಾವದೀಪ್ತಿ ಕಾದಂಬರಿಯಲ್ಲಿ ಲೇಖಕರು ಗಿಡ್ಡಪ್ಪನ ಪಾತ್ರವನ್ನು ಮನೋವೈಜ್ಞಾನಿಕವಾಗಿ ಸೃಷ್ಟಿಸಿದ್ದಾರೆ. ಮನೋರೋಗಿಯಾದ ಗಿಡ್ಡಪ್ಪ ಸಂಶಯ ಪ್ರವೃತ್ತಿಯವನು. ತನ್ನ ಹೆಂಡತಿ ಲೀಲಾವತಿ ಒಳ್ಳೆಯವಳೆ, ಆದರೆ ಅವಳು ಎಲ್ಲಿ ತನಗೆ ಮೋಸ ಮಾಡುತ್ತಾಳೋ ಎಂಬ ಭೀತಿ ಇವನದು. ಆದ್ದರಿಂದಲೇ ಕೆಲಸಕ್ಕೆ ಬರುವಾಗಲೇ ಮನೆಯಲ್ಲಿ ಹೆಂಡತಿಯನ್ನು ಗೃಹಬಂಧನದಲ್ಲಿ ಇಟ್ಟಿದನು. ಇದನ್ನು ಅಕ್ಕ–ಪಕ್ಕದವರು ವಿರೋಧಿಸಿದರು. ಅವರಿಗೂ ಜವಾಬು ನೀಡಿ ಮತ್ತೇ ಹಾಗೆ ಮನೆಗೆ ಬೀಗ ಹಾಕೊಂಡು ಹೋಗುತ್ತಿದ್ದರು. ಅದಕ್ಕಾಗಿಯೇ ಇವನಿಗೆ 'ಜೈಲರ್ ಗಿಡ್ಡಪ್ಪ' ಎಂಬ ಅಡ್ಡ ಹೆಸರಿನಿಂದ ಕರೆಯಲಾರಂಭಿಸಿದರು. "ಹೆಂಡತಿ ಲೀಲಾ ನೀವು ಬೀಗ ಹಾಕಬಾರದು, ನನ್ನಿಂದ ಇದು ಸಹಿಸೋಕ್ಕೆ ಆಗೋದಿಲ್ಲ" ಅವನು ಅವಳ ತೋಳು ಹಿಡಿದು ಒಳಗೆ ನೂಕಿದ. ಅವಳು ಹೋಗಿ ಅಡಿಗೆ ಮನೆ ಬಾಗಿಲಿಗೆ ಅಪ್ಪಳಿಸಿ ಕೆಳಗೆ ಉರುಳಿದಳು. ಈ ಮೇಲಿನ ಸಾಲುಗಳಲ್ಲಿ ಮಹಿಳೆ ಮೇಲೆ ಪುರುಷರು ದೈಹಿಕವಾಗಿ ಹಿಂಸಿಸಿ, ಅವರನ್ನು ಮಾನಸಿಕವಾಗಿಯೂ ಕುಗ್ಗಿಸುವ ಪ್ರಯತ್ನ ಮಾಡುತ್ತಾರೆ. ಹಾಗೆ ಅವರಿಗೆ ಸಮಾಜದಲ್ಲಿ ಯಾವುದೇ ಸ್ಥಾನಮಾನ ದೊರಕದಂತೆ ಮಾಡಿ ಮನೆಯೊಂದರಲ್ಲಿ ಬಂಧಿಸುವ ಪ್ರಕ್ರಿಯೆಯನ್ನು ಸ್ತ್ರೀಯ ಸ್ವತಂತ್ರಹರಣ ಮಾಡುತ್ತಿರುವುದನ್ನು ಕಾಣುತ್ತೇವೆ.

ತನಗೆ ಮೋಸವಾಗಬಾರದೆಂಬ ಕಾರಣಕ್ಕೆ ಹೆಂಡತಿಯ ಆಸೆ–ಆಕಾಂಕ್ಷೆಗಳನ್ನು ಕೊಲ್ಲುವ ಗಿಡ್ಡಪ್ಪ ತನ್ನ ತಾಯಿ ಹೇಳಿದಾಗೆ ತನ್ನ ಹೆಂಡತಿಯನ್ನು ತುಂಬಾ ಕಡಿವಾಣ ಹಾಕಿ ಇರಿಸಿಕೊಂಡಿದ್ದ ಗಿಡ್ಡಪ್ಪ, ತಾಯಿ ಮಗನ ಸರ್ಕಾರಿ ಈ ಕೆಲಸಕ್ಕೆ ತನ್ನಲಿದ್ದ ಒಡವೆ–ಜಮೀನು ಮಾರಿ ನೌಕರಿ ಕೊಡಿಸಿದ್ದಳು. ತಾಯಿ ವಯೋಸಹಜ ಖಾಯಿಲೆಯಿಂದ ತೀರಿಹೋದಳು. ಈಗ ಹೆಂಡತಿಯನ್ನು ಮನೆಯಲ್ಲಿ ಪ್ರೀತಿಸುವುದಕ್ಕಿಂತ ಹಿಂಸಿಸುವುದೇ ಹೆಚ್ಚಾಗಿದೆ.

ಗಿಡ್ಡಪ್ಪ ಇತ್ತೀಚೆಗೆ ಸೊರಗಿದ್ದ ತುಂಬಾ ಸೊರಗಿದ್ದ ಯಾವಾಗಲೂ ಅನ್ಯಮನಸ್ಕನಾಗುತ್ತಿದ್ದ, ಜಯದೇವ ಅಂದುಕೊಂಡತೆ ಗಿಡ್ಡಪ್ಪ ಮನೋರೋಗಿ, ಅಸಹಜವಾದ ಇವನ ಸ್ವಭಾವ ಹೆಂಡತಿಯ ಪಾಲಿಗೆ ಹಿಂಸೆಯಾಗಿದೆ. ಈತ ಕೂಡ ಸುಖಿಯಾಗಿರಲಿಲ್ಲ. ಮದುವೆಯಾಗಿ ಎರಡು ವರ್ಷವಾದರೂ ಮಕ್ಕಳಾಗಲಿಲ್ಲ ಎಂಬ ಚಿಂತೆಯಿಂದ ಸೊರಗಿದ್ದ, ಹೆಂಡತಿಯ ಜೊತೆ ಅನುಮಾನದಿಂದ ಅವಳ ಜೊತೆ ಸರಿಯಾಗಿ ಸಂಸಾರ ನಡೆಸದೆ, ಅದೇ ಚಿಂತನೆಯಲ್ಲಿದ್ದನು. ಗಿಡ್ಡಪ್ಪ ಸಮಯ ಕಳೆಯುತ್ತಾ ಲೀಲಾವತಿ ತನ್ನ ಗಂಡನ ವರ್ತನೆಯಿಂದ ಬೇಸತ್ತು ತನ್ನ ಮೈ–ಮೇಲೆ ತನ್ನ ಅತ್ತೆ (ಗಿಡ್ಡಪ್ಪನ ತಾಯಿ) ಅವಾಹನೆ ಆಗುವುದು ಪೂಜೆಯ ನಂತರ ವಾಸ್ತವ ಸ್ಥಿತಿಗೆ ಬರುವಾಗಿ ನಟಿಸಲು ಪ್ರಯತ್ನಿಸಿದಳು. ಇಲ್ಲಿ ಲೀಲಾವತಿ

ತನ್ನ ಅಸ್ಥಿತ್ವಕ್ಕೆ ಹೋರಾಟ ಮಾಡುವುದನ್ನು ಅರಿಯುತ್ತೇವೆ. ಹಾಗೆಯೇ ಈ ಬಗೆಯ ಸನ್ನಿವೇಶದಿಂದ ಹೊರಬರಲು ಆಗದೇ ಜೀವಿಸಲು ತುಂಬಾ ನೋವನ್ನು ಅನುಭವಿಸುತ್ತಾಳೆ. ಲೀಲಾವತಿಯ ಮೈ ಮೇಲೆ ಅವಳ ಅತ್ತೆ ತುಂಬಿಕೊಳ್ಳ ತೊಡಗಿದ್ದರಿಂದ ಆದ ಅನುಕೂಲವೆಂದರೆ, ಗಿಡ್ಡಪ್ಪ ಮನೆಗೆ ಬೀಗ ಹಾಕುವುದನ್ನು ನಿಲ್ಲಿಸಿದ್ದು, ತಾಯಿಯೇ ಅವಳ ರಕ್ಷಣೆಗಿರುತ್ತಾಳೆ. ಅಂದ ಮೇಲೆ ಅವಳು ಎಲ್ಲಿಗೆ ಹೋದಾಳು ಎಂದಾತ ಯೋಚಿಸಿದ.

ಪೂಜೆಯ ನೆಪದಲ್ಲಿ ಪೂಜಾರಪ್ಪನಿಂದ ಏಟು ತಿಂದರೆ ಲೀಲಾ, ಚೇತರಿಸಿಕೊಳ್ಳಲು ಐದಾರು ದಿನ ತೆಗೆದುಕೊಂಡಳು. ಅವಳ ಮುಖ ಬೆನ್ನು ತೋಳುಗಳನ್ನು ಲೆಕ್ಕಿಸದ ಬೆರಳುಗಳಿಂದ ಚಚ್ಚಿ ಹಾಕಿದ್ದ, ಆತ, ಹೋಗು, ಹೋಗು ಎಂದು ರಪ–ರಪನೆ ಬಾರಿಸುದ್ದರಿಂದ ಅವಳ ಕೆಂಪು ಮೈ ಕಪ್ಪುಗಟ್ಟಿತ್ತು. ಪೂಜರಪ್ಪನ ಏಟು ತಾಳಲಾರದೆ ಆಕೆ ಕೊನೆಗೆ ಹೋಗ್ತಿನಿ–ಹೋಗ್ತಿನಿ ಎಂದು ಕೂಗಿ ಪ್ರಜ್ಞೆ ತಪ್ಪಿ ಬಿದ್ದಿದ್ದಳು, ಗಿಡ್ಡಪ್ಪ 'ನಿಮ್ಮವ್ವ ಬಂದೋಳಾಲ್ಲ ಇನ್ ನಿನ್ನ ಹೆಂಡತಿ ಸುಖವಾಗಿಯಿರುತ್ತಾಳೆ" ಎಂದು ಪೂಜಾರಪ್ಪ ಹೇಳಿ ಹೊರಟ ಆದರೂ ಗಿಡ್ಡಪ್ಪನಿಗೆ ಅನುಮಾನ ಆದರೂ ಹೆಂಡತಿಯನ್ನು ಹೆಂಡತಿಯೆಂದು ಕಾಣುವಂತಿಲ್ಲ.

ಈ ಪರಿಸ್ಥಿತಿಯಿಂದ ಗಿಡ್ಡಪ್ಪ, ದಿನದಿಂದ ದಿನಕ್ಕೆ ತನ್ನ ಮಾನಸಿಕ ಸ್ಥಿಮಿತ ಕಳೆದುಕೊಳ್ಳುತ್ತಿದ್ದನು. ಪರಿಸ್ಥಿತಿ ಸಂದರ್ಭಗಳು ಗಿಡ್ಡಪ್ಪನ್ನು ಪ್ರೇರಿಪಿಸಿ ಇದ್ದರಿಂದಾಗಿ ಆತ ತನ್ನ ಜೀವನದ ನಿರ್ಧಾರಗಳನ್ನು ತೆಗೆದುಕೊಳ್ಳುವಲ್ಲಿ ಸೋಲುತ್ತಾರೆ. ಲೀಲಾವತಿಯ ಮೈ ಮೇಲೆ ಸಾಕಮ್ಮ ಬಂದಿದ್ದರಿಂದ, ಅವಳ ಬಂಧನದಿಂದ ಪಾರಾಗಿದ್ದಾಳೆ. ಅವಳಿಗೆ ರುಚಿಕರವಾದ ಭಕ್ಷ–ಬೋಜನ ದೊರೆತಿದ ಒಳ್ಳೆಯ ಸೀರೆಯು ದೊರಕಿದೆ.

ಹೀಗೆ ತನ್ನನ್ನು ಹಿಂಸೆಯಿಂದ ತಪ್ಪಿಸಿಕೊಳ್ಳಲು ಈ ರೀತಿ ನಾಟಕವಾಡುತ್ತಾಳೆ. ಲೀಲಾವತಿ ಈ ರೀತಿಯಿಂದಲೂ ತನ್ನೆಲ್ಲಾ ಆಸೆಗಳನ್ನ ಪೂರೈಸಿಕೊಳ್ಳುವ ತವಕ ಈ ರೀತಿಯಾಗುತ್ತಿರುವುದಕ್ಕೆ ಲೀಲಾ ಮನಸ್ಸಿನಲ್ಲಿಯೇ ಕೊರಗುತ್ತಾರೆ. ಎಲ್ಲಾ ಮಲಗಿದ ಮೇಲೆ ಅನ್ಯ ಮನಸ್ಕಳಾಗಿ ತನಗೆ ಪರರಿಗಿರುವ ಸ್ವಾತಂತ್ರವಿಲ್ಲ, ಆ ಸ್ಥಾನಮಾನವಿಲ್ಲ, ಆ ಗೌರವವಿಲ್ಲ ತನ್ನನ್ನು ಗಂಡ ಬೀಗ ಹಾಕಿದ ಬಾಗಿಲ ಹಿಂದೆ ಬಿಗಿಯುವುದರಿಂದ ಜನ ತನ್ನ ಬಗ್ಗೆ ವಿಚಿತ್ರವಾಗಿ ಮಾತನಾಡುತ್ತಾರೆ. ತನ್ನನ್ನು ವಿಚಿತ್ರವಾಗಿ ಕಾಣುತ್ತಾರೆ ಎಂಬ ಹಲವು ಬಗೆಯ ವಿಚಾರಗಳು ವೇದನೆಯ ಒಂದೊಂದು ರೇಖೆಗಳಾಗಿ ಮಾರ್ಪಾಟ್ಟಿದ ಅವಳು ನೋವಿನ ಮುಖ ಹೊತ್ತು ನಿಂತಿದ್ದಳು. ಸಹಜವಾಗಿ ಬದುಕಬೇಕಾದ ಹೆಣ್ಣು ಏನೆಲ್ಲಾ ಪಾಡು ಪಡುತ್ತಾಳಲ್ಲ. ಆದರೆ ಲೀಲಾ ಒಂದು ಅರ್ಥದಲ್ಲಿ ಪ್ರತಿಭಟನೆಯನ್ನು ಆರಂಭಿಸಿದ್ದಾಳೆ? ಗಿಡ್ಡಪ್ಪನನ್ನು ಕುಣಿಸಿ ಒಂದು ಬಗೆಯ ಸೇಡಿನ ತೃಪ್ತಿ ಪಡುವ ಯತ್ನ ಈಕೆ ಮಾಡುತ್ತಿದ್ದಳು.

ಈ ಲೇಖನವು ಭಾವದೀಪ್ತಿ ಕಾದಂಬರಿಯನ್ನು ಮನೋವೈಜ್ಞಾನಿಕ ದೃಷ್ಟಿಕೋನದಿಂದ ಅಧ್ಯಯನ ಮಾಡಿ, ಪಾತ್ರಗಳ ವರ್ತನೆ ಮತ್ತು ಸಮಾಜದ ರಚನೆ ನಡುವಿನ ಸಂಬಂಧವನ್ನು ವಿಶ್ಲೇಷಿಸಲು ಉದ್ದೇಶಿಸುತ್ತದೆ.

ಸಾಹಿತ್ಯ ಮತ್ತು ಮನೋವಿಜ್ಞಾನಿಗಳ ಪರಸ್ಪರ ಸಂಬಂಧವನ್ನು ಅರಿತುಕೊಳ್ಳುವ ಮೂಲಕ, contemporary ಸಮಾಜದಲ್ಲಿ ವ್ಯಕ್ತಿಯ ಮಾನಸಿಕ ಸಮಸ್ಯೆಗಳು ಮತ್ತು ಸ್ತ್ರೀ ಅನುಭವಗಳ ನಿಜವಾದ ಅರ್ಥವನ್ನು ಗ್ರಹಿಸುವ ಪ್ರಯತ್ನವನ್ನು ಈ ಅಧ್ಯಯನ ಮಾಡುತ್ತದೆ.

ಬೇಸೂರು ಮೋಹನ್ ಪಾಳೇಗಾರರ ಭಾವದೀಪ್ತಿ ಕಾದಂಬರಿಯಲ್ಲಿ ವ್ಯಕ್ತಿಯೊಳಗಿನ ಅನುಮಾನ, ಅಸುರಕ್ಷತೆ ಮತ್ತು ಅತಿಯಾದ ಸ್ವಾಮಿತ್ವ ಭಾವಗಳು ಹೇಗೆ ಮಾನಸಿಕ ಅಸ್ಥಿರತೆಯಾಗಿ ಪರಿವರ್ತನೆಗೊಳ್ಳುತ್ತವೆ ಎಂಬುದನ್ನು ಸ್ಪಷ್ಟವಾಗಿ ಕಾಣಬಹುದು. ಕಾದಂಬರಿಯ ಪಾತ್ರಗಳು ತಮ್ಮ ವೈಯಕ್ತಿಕ ಮತ್ತು ಸಾಮಾಜಿಕ ಬದುಕಿನ ಸಂಘರ್ಷಗಳಿಂದ ಮಾನಸಿಕ ಒತ್ತಡಕ್ಕೆ ಒಳಗಾಗುತ್ತವೆ. ವಿಶೇಷವಾಗಿ ಗಿಡ್ಡಪ್ಪನ ಪಾತ್ರದಲ್ಲಿ ಕಾಣಿಸುವ ಅನುಮಾನಗ್ರಸ್ತ ಮನಸ್ಥಿತಿ ಹಾಗೂ ಅದರ ಪರಿಣಾಮವಾಗಿ ಲೀಲಾವತಿಯ ಜೀವನದಲ್ಲಿ ಉಂಟಾಗುವ ಮಾನಸಿಕ ಮತ್ತು ಸಾಮಾಜಿಕ ಸಂಕಟಗಳು ಗಮನಾರ್ಹವಾಗಿವೆ.

ಹೀಗೆ ಅನುಮಾನದಿಂದ ಪ್ರತಿದಿನ ಹಿಂಸಿಸುತ್ತಿದ್ದ ಗಿಡ್ಡಪ್ಪನ ಜೊತೆ ಬದುಕುವುದು ಕಷ್ಟವಾಯಿತು. ಹಾಗಾಗಿ ಲೀಲಾ ಪ್ರತಾಪನ ಜೊತೆ ಬೆಂಗಳೂರಿಗೆ ಹೋಡಿ ಹೋದಳು. ವಿಷಯ ತಿಳಿದ ಗಿಡ್ಡಪ್ಪ ಆತ್ಮಹತ್ಯೆಗೆ ಶರಣಾಗುತ್ತಾನೆ. ಸುಂದರವಾದ ಸಂಸಾರ ಒಳ್ಳೆಯ ಹೆಂಡತಿ ಕೈ ತುಂಬಾ ಸಂಬಳ ಬರುವ ನೌಕರಿ ಎಲ್ಲಾ ಇದ್ದರು ತನ್ನ ಈ ವರ್ತನೆಯಿಂದಾಗಿ ಪೂರ್ವಗ್ರಹ ಪೀಡಿತನಾಗಿ ಅನುಮಾನ ಎಂಬ ಮಾನಸಿಕ ರೋಗದಿಂದ ತನ್ನ ಸಂಹಾರವನ್ನು ತಾನೇ ಹಾಳು ಮಾಡಿಕೊಳ್ಳುತ್ತಾನೆ. ಕೊನೆಗೆ ತನ್ನ ಪ್ರಾಣವನ್ನು ಕಳೆದುಕೊಳ್ಳುವಷ್ಟು ಮಾನಸಿಕವಾಗಿ ಕುಗ್ಗಿ ಹೋದನು ಗಿಡ್ಡಪ್ಪ.

## ಈ ಕಾದಂಬರಿಯಲ್ಲಿ ಬರುವ ಪ್ರಮುಖ ಅಂಶಗಳು:

### 1. ಲೇಖನದ ಕೇಂದ್ರ ವಿಚಾರ

ಈ ಲೇಖನವು ಭಾವದೀಪ್ತಿ ಕಾದಂಬರಿಯಲ್ಲಿನ ಪಾತ್ರಗಳ ಮನೋವೈಜ್ಞಾನಿಕ ಸ್ಥಿತಿಯನ್ನು ವಿಶ್ಲೇಷಿಸುತ್ತದೆ. ವಿಶೇಷವಾಗಿ ಅವಮಾನ, ಅತಿಯಾದ ಸ್ವಾಮಿತ್ವ ಭಾವ ಮತ್ತು ಸಾಮಾಜಿಕ ಒತ್ತಡಗಳು ವ್ಯಕ್ತಿಯ ಮಾನಸಿಕ ಸಮತೋಲನವನ್ನು ಹೇಗೆ ಕೆಡಿಸುತ್ತವೆ ಎಂಬುದನ್ನು ಸ್ಪಷ್ಟಪಡಿಸುತ್ತವೆ.

### 2. ಪಾತ್ರಗಳ ಮನೋವೈಜ್ಞಾನಿಕ ಸ್ಥಿತಿ

ಗಿಡ್ಡಪ್ಪನ ಪಾತ್ರವು **'ಅನುಮಾನಗ್ರಸ್ತ ಮನಸ್ಥಿತಿ (Paranoid tendency)'** ಯ ಪ್ರತಿನಿಧಿಯಾಗಿದೆ. ಅವನೊಳಗಿನ ಭಯ, ಅಸುರಕ್ಷತೆ ಮತ್ತು ಸಂಶಯ ಕ್ರಮೇಣ ಮಾನಸಿಕ ರೋಗ ಸ್ವರೂಪ ಪಡೆಯುತ್ತವೆ. ಇದರಿಂದ ಅವನ ವರ್ತನೆ ಹಿಂಸಾತ್ಮಕವಾಗುತ್ತಾ, ಕುಟುಂಬ ಸಂಬಂಧಗಳು ಸಂಪೂರ್ಣವಾಗಿ ಕುಸಿಯುತ್ತವೆ.

**3. ಸ್ತ್ರೀ ಪಾತ್ರದ ಸಾಮಾಜಿಕ–ಮಾನಸಿಕ ಸ್ಥಿತಿ**

ಲೀಲಾವತಿ ಪಾತ್ರವು ಗೃಹಬಂಧನ, ಮಾನಸಿಕ ಹಿಂಸೆ ಮತ್ತು ಸಾಮಾಜಿಕ ಮೌನದೊಳಗೆ ಬದುಕುವ ಮಹಿಳೆಯ ಪ್ರತಿನಿಧಿಯಾಗಿದೆ. ಅವಳ ಮೌನವೇ ಸಮಾಜದಲ್ಲಿ ಮಹಿಳೆಯರಿಗೆ ದೊರೆಯುವ ಅಸಮಾನ ಸ್ಥಾನಮಾನವನ್ನು ತೋರಿಸುತ್ತದೆ. ಮಾನಸಿಕವಾಗಿ ಅವಳು ತೀವ್ರ ಸಂಘರ್ಷ ಅನುಭವಿಸುತ್ತಾಳೆ.

**4. ಸಾಮಾಜಿಕ ಹಿನ್ನೆಲೆ**

ಪಿತೃತ್ವ ವ್ಯವಸ್ಥೆ, ಮೂಢನಂಬಿಕೆಗಳು ಮತ್ತು ಲಿಂಗ ಸಮಾನತೆಗಳು ವ್ಯಕ್ತಿಯ ಮನಸ್ಸಿನ ಮೇಲೆ ಗಂಭೀರ ಪರಿಣಾಮ ಬೀರುತ್ತವೆ. ಇಂತಹ ಸಮಾಜದಲ್ಲಿ ಮಾನಸಿಕ ಸಮಸ್ಯೆಗಳನ್ನು ರೋಗವಾಗಿ ಅಲ್ಲದೆ ದೋಷವಾಗಿ ಕಾಣುವುದರಿಂದ ಸಮಸ್ಯೆ ಇನ್ನಷ್ಟು ಗಂಭೀರವಾಗುತ್ತದೆ.

**5. ಸಾಹಿತ್ಯ ಮತ್ತು ಮನೋವಿಜ್ಞಾನ ಸಂಬಂಧ**

ಈ ಲೇಖನವು ಸಾಹಿತ್ಯವು ಕೇವಲ ಕಥನವಾಗಿರದೆ ಮಾನವ ಮನಸ್ಸಿನ ಅಧ್ಯಯನಕ್ಕೂ ಒಂದು ಸಾಧನವಾಗಬಹುದು ಎಂಬುದನ್ನು ತೋರಿಸುತ್ತದೆ. ಪಾತ್ರಗಳ ವರ್ತನೆ, ಸಂಭಾಷಣೆ ಮತ್ತು ಘಟನೆಗಳು ಮನೋವೈಜ್ಞಾನಿಕ ಸಿದ್ಧಾಂತಗಳಿಗೆ ಸಮರ್ಥನೆ ನೀಡುತ್ತವೆ.

ಒಟ್ಟಾರೆಯಾಗಿ ಈ ಕಾದಂಬರಿಯಲ್ಲಿ ಲೇಖಕರು ಮನೋರೋಗಿಯ ಪಾತ್ರವಾದ ಗಿಡ್ಡಪ್ಪನಂತಹ ವ್ಯಕ್ತಿಗಳಿಂದ ಅನೇಕ ಸಮಸ್ಯೆಗಳಿಗೆ ಸಿಲುಕಿ ವ್ಯಥೆಯನ್ನು ಪಡುವ ಲೀಲಾವತಿಯಂತಹ ಹೆಣ್ಣು ಮಕ್ಕಳ ಸಂವೇದನೆಯನ್ನು ಗುರುತಿಸಿದ್ದಾರೆ. ಲೀಲಾಗೆ ತನಗೆ ಸಿಗಬೇಕಾದ ಪ್ರೀತಿ–ಗೌರವ ಗಿಡ್ಡಪ್ಪನಿಂದ ಸಿಕ್ಕಿದರೆ ಅವಳು ಎಲ್ಲಾರಾಗೆ ತಾನು ಗಂಡನ ಜೊತೆ ಸಂಸಾರ ಮಾಡುತ್ತಿದ್ದಳು. ಪೂಜೆ–ಪುರಸ್ಕಾರದಿಂದ ಏಟು–ಗಾಯಗಳಿಂದ ದೈಹಿಕವಾಗಿ ಮತ್ತು ಮಾನಸಿಕವಾಗಿಯೂ ಹಿಂಸೆಯನ್ನು ಅನುಭವಿಸಿದಳು. ಕೊನೆಗೆ ಲೀಲಾ ತನ್ನ ಗಂಡನಿಂದ ಸಿಗದ ಪ್ರೀತಿಗಾಗಿ ಅರಸಿ ಬಿಟ್ಟುಹೋದಳು. ಇಲ್ಲಿ ಗಿಡ್ಡಪ್ಪನ ಪಾತ್ರ ಮನೋವೈಜ್ಞಾನಿಕ ನೆಲೆಯಲ್ಲಿ ವಿಶ್ಲೇಷಿಸಬಹುದಾಂತಹ ಪಾತ್ರವಾಗಿದೆ. ಗಿಡ್ಡಪ್ಪನಂತಹ ವ್ಯಕ್ತಿಯು ಸಾಮಾಜಿಕವಾಗಿ ಬದಲಾವಣೆ ಕಾಣದಿದ್ದರೆ, ಇಂತಹ ಪರಿಸ್ಥಿತಿ ಉಲ್ಬಣಗೊಂಡು ಗಂಭೀರ ಸ್ಥಿತಿಗೆ ತಲುವ ಸಂದರ್ಭವನ್ನು ವಿವರಿಸಿದ್ದಾರೆ.

**ಪರಾಮರ್ಶನ ಗ್ರಂಥಗಳು**

1. ಅಶೋಕ ಟಿ.ಪಿ. –ವಾಸ್ತವತಾವಾದ (ಸಂ)ಕನ್ನಡ ಸಾಹಿತ್ಯ ಅಕಾಡೆಮಿ,ಬೆಂಗಳೂರು, 1999.
2. ಉಮೇಶ್ ಹೆಚ್.ಎಸ್.–ಶೈಕ್ಷಣಿಕ ಮನೋವಿಜ್ಞಾನ,ವಿಸ್ಮಯ ಪ್ರಕಾಶನ,ಮೂರನೇ ಆವೃತ್ತಿ, 2009.
3. ನಟರಾಜ್ ಪಿ–ಸಾಮಾನ್ಯ ಮನೋವಿಜ್ಞಾನ,ಶ್ರೀನಿವಾಸ ಪ್ರಕಾಶನ, ಮೈಸೂರು,2009
4. ಪದ್ಮಾ ಶೇಖರ್ –'ಉಯ್ಯಾಲೆ' ಮನೋವಿಶ್ಲೇಷಣಾತ್ಮಕ ನೆಲೆ,ಪರಿಸ್ಪಂದನೆ, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್,ಮೈಸೂರು, 1990.
5. ಬೇಸೂರು ಮೋಹನ್ ಪಾಳೇಗಾರ್–ಭಾವದೀಪ್ತಿ,ಸಿರಿಗಂಧ ಪ್ರಕಾಶ,ಮೈಸೂರು, 2004.